# ಸಚಿನ್ ತೆಂಡೂಲ್ಕರ್ ಹಾಜರಿ!

‘ರಾಜ್ಯಸಭೆಯ ಸದಸ್ಯರಾದವರು ಸದನ ಕಲಾಪಗಳಿಗೆ ಹಾಜರಾಗಬೇಕು. ಸಾಧ್ಯವಿಲ್ಲ ಎಂದಾದರೆ ರಾಜೀನಾಮೆ ಕೊಡಲಿ’ ಎಂದು ಕಳೆದ ವಾರ ರಾಜ್ಯಸಭೆಯ ಹಿರಿಯ ಸದಸ್ಯರೊಬ್ಬರು ಸಿಟ್ಟಿನಿಂದ ಮಾತನಾಡಿದರು. ಅದಾಗಿ ಎರಡೇ ದಿನಗಳಲ್ಲಿ ಅಭಿಮಾನಿಗಳ ‘ಕ್ರಿಕೆಟ್ ದೇವರು’ ಸಚಿನ್ ತೆಂಡೂಲ್ಕರ್ ಮತ್ತು ಬಾಲಿವುಡ್‌ನ ಚಿರಜವ್ವನೆ ರೇಖಾ ಇಬ್ಬರೂ ರಾಜ್ಯಸಭೆಯಲ್ಲಿ ಹಾಜರಿ ಹಾಕಿದರು.

ಟ್ವಿಟ್ಟರ್‌ನಲ್ಲಿ ಸಚಿನ್ ವಿರುದ್ಧ ಟೀಕೆ, ಲೇವಡಿಗಳ ಸುರಿಮಳೆಯೇ ಆಯಿತು. ಒಬ್ಬಾತ ‘ಈದ್ ಕಾ ಚಾಂದ್’ (ರಂಝಾನಿನ ಚಂದಿರ) ಎಂದರೆ, ಇನ್ನೊಬ್ಬಾತ, ‘ಇಡೀ ಭಾರತ ಎರಡು ವಿಷಯಗಳಿಗಾಗಿ ಕಾಯುತ್ತಿತ್ತು; ಒಂದು ಜಿಎಸ್‌ಟಿ ಜಾರಿ, ಇನ್ನೊಂದು ಇದು’ ಎಂದು ಚಟಾಕಿ ಹಾರಿಸಿದ. ಎಲ್ಲಕ್ಕಿಂತ ತಮಾಷೆಯಾಗಿರುವ ಟ್ವಿಟ್ಟರ್ ಕಾಮೆಂಟು ಹೀಗಿತ್ತು:

ಸಚಿನ್: ಸ್ಪೀಕರ್ ಸರ್, ನಾನು ಏನೋ ಹೇಳಬೇಕು..

ಸ್ಪೀಕರ್: ಹೇಳಿ.

ಸಚಿನ್: ನನ್ನ ಹೊಸ ಸಿನಿಮಾ ಅಮೆಜಾನ್.ಕಾಮ್ ನಲ್ಲಿ ಸಿಗುತ್ತಿದೆ ಸಾರ್!

ಎಲ್ಲ ಲೇವಡಿಗಳಿಗೂ ಕಾರಣಗಳಿವೆ. 2012ರಲ್ಲಿ ಕೇಂದ್ರ ಸರ್ಕಾರದ ಶಿಫಾರಸ್ಸಿನ ಮೇರೆಗೆ ರಾಷ್ಟ್ರಪತಿಯವರಿಂದ ರಾಜ್ಯಸಭೆಗೆ ನಾಮಕರಣಗೊಂಡವರು ಸಚಿನ್. ಸದಸ್ಯರಾಗಿ ಪ್ರಮಾಣವಚನ ಸ್ವೀಕರಿಸಿದ ಬಳಿಕ ಒಟ್ಟು 348 ದಿನಗಳ ಕಾಲ ರಾಜ್ಯಸಭೆಯ ಕಲಾಪ ನಡೆದಿದೆ. ಅದರಲ್ಲಿ ಸಚಿನ್ ಹಾಜರಿ ಕೇವಲ 23 ದಿನ! ಅಂದರೆ ಶೇಕಡಾ 5.5 ಮಾತ್ರ! 2013ರಲ್ಲಿ ಸಚಿನ್ ಮೂರು ಅಧಿವೇಶನಗಳಲ್ಲಿ ಭಾಗವಹಿಸಿದರೆ, 2014ರಲ್ಲಿ ಒಂದೂ ಅಧಿವೇಶನಕ್ಕೆ ಬಂದಿಲ್ಲ. ಈ ಐದು ವರ್ಷಗಳಲ್ಲಿ ಸಚಿನ್ ರಾಜ್ಯಸಭೆಯಲ್ಲಿ ಕೇಳಿರುವ ಪ್ರಶ್ನೆಗಳ ಒಟ್ಟು ಸಂಖ್ಯೆ ಏಳು! (ರೇಖಾ ಕೇಳಿದ ಪ್ರಶ್ನೆಗಳು ಶೂನ್ಯ! ಸಚಿನ್ನೇ ವಾಸಿ ಅನ್ನುವಿರಾ?) ಸಚಿನ್ ಈವರೆಗೆ ರಾಜ್ಯಸಭೆಯಲ್ಲಿ ಯಾವ ಚರ್ಚೆಯಲ್ಲೂ ಭಾಗವಹಿಸಿಲ್ಲ. (ಕಳೆದ ವರ್ಷವಷ್ಟೇ ರಾಜ್ಯಸಭೆಗೆ ನಾಮಕರಣಗೊಂಡ ಬಾಕ್ಸಿಂಗ್ ಪಟು ಮೇರಿ ಕೋಮ್ ಎರಡು ಚರ್ಚೆಗಳಲ್ಲಿ ಭಾಗವಹಿಸಿದ್ದಾರೆ!)

ಕಲೆ, ಸಾಹಿತ್ಯ, ಕ್ರೀಡೆ, ವಿಜ್ಞಾನ, ಸಮಾಜಸೇವೆ ಕ್ಷೇತ್ರಗಳಲ್ಲಿ ಮಹತ್ವದ ಸಾಧನೆಯನ್ನು ಮಾಡಿದ ಒಟ್ಟು 12 ಜನರನ್ನು ರಾಜ್ಯಸಭೆಗೆ ಹೀಗೆ ನಾಮಕರಣ ಮಾಡಲು ರಾಜ್ಯಾಂಗದಲ್ಲಿ ಅವಕಾಶವಿದೆ. ಈ ಕ್ಷೇತ್ರ ಪರಿಣಿತರು ತಮ್ಮ ಅನುಭವದಿಂದ ಚರ್ಚೆಯಲ್ಲಿ ಭಾಗವಹಿಸಿ ಮಹತ್ವದ ಕೊಡುಗೆ ನೀಡಬಹುದು ಎನ್ನುವುದು ಉದ್ದೇಶ. ಅವರ ಅನುಭವ ದೇಶದ ಪ್ರಗತಿಗೆ ಪೂರಕವಾಗಿ ದಕ್ಕಲಿ ಎನ್ನುವುದು ಆಶಯ. ಆದರೆ ಒಂದೂ ಚರ್ಚೆಯಲ್ಲಿ ಭಾಗವಹಿಸದಿದ್ದರೆ, ಯಾವತ್ತೋ ಒಂದು ದಿನ ಮಾತ್ರ ರಾಜ್ಯಸಭೆಗೆ ಬಂದು ಸುಮ್ಮನೆ ಕುಳಿತುಕೊಂಡರೆ ಏನು ಪ್ರಯೋಜನ? ಹಾಗಾಗಿ ರಾಜೀನಾಮೆಗೆ ಆಗ್ರಹಿಸಿದ್ದು ಸರಿಯಾಗಿಯೇ ಇದೆ ಎನ್ನುವುದು ಹೆಚ್ಚಿನವರ ವಾದ.

ಆದರೆ ಸಚಿನ್ ಅಭಿಮಾನಿಗಳು ಈ ವಾದವನ್ನು ಒಪ್ಪುವುದಿಲ್ಲ. ‘ಸಚಿನ್ ಅವರು ಕ್ರಿಕೆಟ್‌ಲೋಕದ ದಂತಕಥೆ. ಅವರ ವಿಶ್ವದಾಖಲೆಯ ಬ್ಯಾಟಿಂಗ್ ದೇಶಕ್ಕೆ ಎಷ್ಟೋ ಬಾರಿ ಗೌರವ ತಂದುಕೊಟ್ಟಿದೆ. ಅವರನ್ನು ಗೌರವಿಸಲೆಂದೇ ರಾಜ್ಯಸಭೆಗೆ ನಾಮಕರಣ ಮಾಡಲಾಗಿದೆ’ ಎನ್ನುವುದು ಅಭಿಮಾನಿಗಳ ಪ್ರತಿವಾದ. ‘ಒಬ್ಬ ಸಾಧಕನನ್ನು ಗೌರವಿಸಲು ಸರ್ಕಾರಕ್ಕೆ ಬೇರೆ ಹಲವಾರು ದಾರಿಗಳಿವೆ. ಪದ್ಮವಿಭೂಷಣ, ಪದ್ಮಶ್ರೀ ಮುಂತಾದ ಗೌರವ ಪ್ರಶಸ್ತಿಗಳಿವೆ. ಅವುಗಳನ್ನು ಕೊಟ್ಟರೆ ಸಾಕು. ರಾಜ್ಯಸಭೆಗೆ ಕಳುಹಿಸಿ ಸುಮ್ಮನೆ ಸರ್ಕಾರದ ದುಡ್ಡು ಏಕೆ ವ್ಯರ್ಥ ಮಾಡುತ್ತೀರಿ?’ ಎನ್ನುವುದು ಟೀಕಾಕಾರರ ಮರುಪ್ರಶ್ನೆ.

ಅಂದ ಹಾಗೆ ರಾಜ್ಯಸಭೆಯ ಸದಸ್ಯ ಸಚಿನ್ ತೆಂಡೂಲ್ಕರ್ ಅವರಿಗಾಗಿ ಸರ್ಕಾರ ಈ ಐದು ವರ್ಷಗಳಲ್ಲಿ ಒಟ್ಟು 58.8 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದೆ. ರಾಜ್ಯಸಭೆಯ ಸದಸ್ಯರಿಗೆ ತಿಂಗಳಿಗೆ 50 ಸಾವಿರ ರೂಪಾಯಿ ಸಂಬಳವಿದೆ. 45 ಸಾವಿರ ರೂಪಾಯಿ ಕ್ಷೇತ್ರ ಭತ್ಯೆ, 15 ಸಾವಿರ ರೂಪಾಯಿ ಕಚೇರಿ ಭತ್ಯೆ ಸಿಗುತ್ತದೆ. ಪ್ರವಾಸ ಮತ್ತು ಕಲಾಪದ ಹಾಜರಿಯ ಆಧಾರದಲ್ಲಿ ದಿನಭತ್ಯೆ ಬೇರೆಯೇ ಇದೆ. ಸಚಿನ್ ಕಲಾಪಕ್ಕೆ ಬಂದಿದ್ದೇ 23 ದಿನಗಳಾಗಿರುವುದರಿಂದ ಮತ್ತು ಎಲ್ಲೂ ಪ್ರವಾಸಕ್ಕೆ ಹೋಗಿಲ್ಲದಿರುವುದರಿಂದ ದಿನಭತ್ಯೆ ಹೆಚ್ಚಾಗಿಲ್ಲ.

ಸಂಸತ್ ಸದಸ್ಯರಿಗೆ ಸ್ಥಳೀಯ ಕ್ಷೇತ್ರಾಭಿವೃದ್ಧಿ ನಿಧಿ ಇದೆ. ಪ್ರತಿ ವರ್ಷ 5 ಕೋಟಿ ರೂಪಾಯಿ ಸಿಗುತ್ತದೆ. ಆದರೆ ಅದಕ್ಕೊಂದು ಷರತ್ತಿದೆ. ಮೊದಲಿಗೆ 2.5 ಕೋಟಿ ರೂಪಾಯಿ ಮಂಜೂರಾಗುತ್ತದೆ. ಆ ಬಳಿಕ ಅದು ಅಭಿವೃದ್ಧಿಗೆ ಖರ್ಚಾದಂತೆ ಉಳಿದ ಹಣ ಸೇರುತ್ತಾ ಹೋಗುತ್ತದೆ. ರಾಜ್ಯಸಭೆಯ ಸದಸ್ಯರು ಅಭಿವೃದ್ಧಿ ಕೆಲಸಕ್ಕೆ ಇಷ್ಟು ಕೊಡಿ ಎಂದು ಶಿಫಾರಸು ಮಾಡಬಹುದು. ಹಣ ಬಿಡುಗಡೆ ಮಾಡುವ ಅಧಿಕಾರ ಆಯಾ ಜಿಲ್ಲಾಧಿಕಾರಿಯದ್ದು. ಐದು ವರ್ಷಗಳ ಒಟ್ಟು 25 ಕೋಟಿ ರೂಪಾಯಿ ನಿಧಿಯಲ್ಲಿ ಸಚಿನ್ ಈಗಾಗಲೆ 21.19 ಕೋಟಿ ರೂಪಾಯಿಗೆ ಶಿಫಾರಸು ಪತ್ರ ಕೊಟ್ಟಿದ್ದಾರೆ. ಅದರಲ್ಲಿ 17.65 ಕೋಟಿ ರೂಪಾಯಿ ದೇಶದ ವಿವಿಧ ರಾಜ್ಯಗಳಲ್ಲಿ ಖರ್ಚಾಗಿದೆ. ದೇಶದ ಯಾವ ಜಿಲ್ಲೆಗೂ ಹೀಗೆ ಸದಸ್ಯರು ಹಣ ನೀಡಲು ಶಿಫಾರಸು ಮಾಡಬಹುದು. ಕಳೆದ ವಾರವಷ್ಟೇ ಸಚಿನ್, ಎರ್ನಾಕುಲಂ ಸರ್ಕಾರಿ ಆಸ್ಪತ್ರೆಯಲ್ಲಿ ಎಕ್ಸ್‌ರೇ ಘಟಕ ಸ್ಥಾಪನೆಗೆ 25 ಲಕ್ಷ ರೂಪಾಯಿ ಸಂಸದರ ನಿಧಿಯಿಂದ ಕೊಟ್ಟಿದ್ದಾರೆ.

ಇವೆಲ್ಲಾ ಸಚಿನ್‌ಗೆ ಜುಜುಬಿ ಹಣ. 44ರ ಹರೆಯದ ಸಚಿನ್, ಈಗ 160 ದಶಲಕ್ಷ ಡಾಲರ್ ಮೌಲ್ಯದ ಆಸ್ತಿ ಹೊಂದಿರುವ ಗಟ್ಟಿಕುಳ. ಇದರಲ್ಲಿ ಬಿಸಿಸಿಐ ಸಂಬಳ, ಜಾಹೀರಾತು ಆದಾಯ ಎಲ್ಲವೂ ಸೇರಿವೆ. ಈಗಲೂ ಅವರ ಜಾಹೀರಾತು ಮೌಲ್ಯ ಕುಂದಿಲ್ಲ. ಆದರೆ ಸರ್ಕಾರದ ಒಂದು ರೂಪಾಯಿಗೂ ಬಹಳ ಕಿಮ್ಮತ್ತಿದೆ. ಏಕೆಂದರೆ ಅದು ಸಾರ್ವಜನಿಕರ ಹಣ. ಸಚಿನ್ ಸ್ವಲ್ಪ ಯೋಚಿಸುವುದು ಒಳ್ಳೆಯದಲ್ಲವೆ? ■



Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65